MR.SPEAKER:- Please sit down. You have got up too many times. ಆಯಿತು ಮುಗಿಸಿದ್ದೇವೆ, ಯೋಗಿಶ್ ಭಟ್ ಎಷ್ಟು ಹೊತ್ತು ನಡೆಸಬೇಕು ಹೇಳಿ?

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಮೊದಲೇ ಅಧ್ಯಕ್ಷರಿಗೆ ಹೇಳಿದೆ, ಎಲ್ಲಿ ಬೆಲ್ಲವಿರುತ್ತದೆ ಅಲ್ಲೇ ಜಾಸ್ತಿ ನೊಣ ಬಂದು ಕುಳಿತುಕೊಳ್ಳುತ್ತವೆ. ಆ ಕಡೆ ನೋಡಿದರೆ ನಿಮ್ಮ ಹತ್ತಿರ ಬಂದು ಕುಳಿತಿದೆ.

ಅಧ್ಯಕ್ಷರು:- ಬೆಲ್ಲದರವರ ಕಡೆ ಹೋಗಿವೆ ನೋಡಿ.

ಶ್ರೀ. ವಾಟಾಳ್ ನಾಗರಾಜ್:- ಹಾಗಾದರೆ ನೀವು, ನಾಯಕರು ಬಹಳ ಖಾರವಾಗಿದ್ದೀರಾ?

ಶ್ರೀ.ಎಂ. ಮಲ್ಲಿಕಾರ್ಜುನ ಖರ್ಗೆ:- ಅದಕ್ಕೆ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕು, ಏಕೆಂದರೆ ನಾಣಯ್ಯನವರು ಕೂಡ ಇಲ್ಲೇ ಇದ್ದಾರೆ.

ಶ್ರೀ. ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ನನ್ನದೊಂದು ವಿಷಯವಿತ್ತು.

ಅಧ್ಯಕ್ಷರು:- ನಿಮ್ಮ ಶೂನ್ಯವೇಳೆ ಇವತ್ತಿಗೆ ಮುಕ್ತಾಯವಾಯಿತು, ನಾಳೆ ಬರುತ್ತದೆ, You are participating in all matters. You wanted to get up on all matters during Zero hour also. That's why you want another opportunity. It does not look nice. How it is possible? I am helpless. You must understand my difficulty also.

ವಿಷಯ (೮) ಮಕ್ಕಳ ಅಭಿವೃದ್ಧಿ ಇಲಾಖೆ ಕುರಿತು (ವಿರೋಧ ಪಕ್ಷದ ನಾಯಕರು)

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೇಳಿಕೆಯನ್ನು ನಾಣಯ್ಯನವರು ಹೊರಗಡೆ ಕೊಟ್ಟಿದ್ದಾರೊ ಅಥವಾ ಆ ಸದನದಲ್ಲಿ ಕೊಟ್ಟಿದ್ದಾರೊ ಗೊತ್ತಿಲ್ಲ, ನಾನು ಪತ್ರಿಕೆಯಲ್ಲಿ ಓದಿದೆ. ಮತ್ತೆ ಇದರ ನಮ್ಮ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ಈಗಾಗಲೇ ವರದಿಯನ್ನು ಕೊಟ್ಟಿದ್ದಾರೆ. ಈ ಐಸಿಡಿಎಸ್ ಪ್ರೊಗ್ರಾಂ ಬಗ್ಗೆ ಸುಮಾರು 21,226 ಮೆಟ್ರಿಕ್ ಟನ್ ಅಕ್ಕಿ, ಪೌಷ್ಠಿಕ ಆಹಾರ 21, 467 ಮೆಟ್ರಿಕ್ ಟನ್, ಇನ್ನು ಮಿಶ್ರಿತ ಪೌಷ್ಠಿಕ ಆಹಾರ, ಮತ್ತು ಮೂರು ದಿವಸದ ಸಲುವಾಗಿ 31, 814 ಮೆಟ್ರಿಕ್ ಟನ್ ಈ ರೀತಿಯಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಸುಮಾರು 39, 985 ಅಂಗನವಾಡಿ ಸ್ಕೂಲ್‌ಗಳಿಗೆ ಖರೀದಿ ಮಾಡುತ್ತಾರೆ. ಆದುದರಿಂದ ಕೇಂದ್ರ ಸರ್ಕಾರದ ನೆರವಿನಿಂದ ಮೂವತ್ತೆರಡು ಲಕ್ಷ ಮಕ್ಕಳಿಗೆ ಪ್ರಯೋಜನವಾಗಬೇಕೆನ್ನುವ ಉದ್ದೇಶದಿಂದ ನಡೆಯತಕ್ಕಂಥ ಒಂದು ಯೋಜನೆಯಾಗಿದೆ. ಇದರಲ್ಲಿ ಸುಮಾರು ಇಪ್ಪತ್ತೈದು ಕೋಟಿ ರೂಪಾಯಿಗಳ ಅವ್ಯವಹಾರ ಆಗಿದೆ ಎನ್ನುವುದು, ಸುಮಾರು ಈ ಮೂರು ಸಂಸ್ಥೆಗಳಾದ ಕರ್ನಾಟಕ ಆಗ್ರೊ

ಪ್ರಾಡಕ್ಟ್ಸ್, ನಂದಿ ಆಗ್ರೋ ಕೋಲರ್, ಇನ್ನೊಂದು ಮಾಮ ಫುಡ್ ಪ್ರಾಡಕ್ಟ್ಸ್, ಏನಿದೆ, ಇದರಿಂದ 7,200 ಮೇಕ್ ಟನ್, 12,000 ಮೆಟ್ರಿಕ್ ಟನ್ ಮತ್ತು 17,000 ಮೆಟ್ರಿಕ್ ಟನ್ ನಷ್ಟು ಈ ಆಹಾರಧಾನ್ಯಗಳನ್ನು ಖರೀದಿ ಮಾಡುವುದರಲ್ಲಿ ಅವ್ಯವಹಾರವಾಗಿದೆ ಎಂದು ಈಗಾಗಲೇ ಮೇಲ್ಮನೆಯ ಸದಸ್ಯರಾದ ಶ್ರೀಮಾನ್ ಉಗ್ರಪ್ಪನವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿಯವರೆವಿಗೂ ಅದರ ಬಗ್ಗೆ ಬರೀ ಸಿ.ಓ.ಡಿ ತನಿಖೆ ಮಾಡಿಸುತ್ತೇವೆಂದು ತಾವು ಹೇಳಿದ್ದೀರಿ. ನನ್ನ ಮನವಿ ಏನೆಂದರೆ, ಬಡವರಿಗೆ ನೇರವಾಗಿ ಅನುಕೂಲವಾಗುವ ಅನೇಕ ಯೋಜನೆಗಳಿವೆ. ಅದು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗಿರಬಹುದು, ಮಕ್ಕಳಿಗಿರಬಹುದು ಅಥವಾ ಮಿಲಿಯನ್ ಪ್ರೋಗ್ರಾಮ್ಸ್ ಇರಬಹುದು, ಕೋಟ್ಯಾಂತ ರೂಪಾಯಿಗಳು ಬಂದದ್ದು ಈ ರೀತಿಯಾಗಿ ದುರುಪಯೋಗ ಮಾಡುವುದಕ್ಕೆ ನಾವು ಬಿಟ್ಟರೆ, ಸ್ವಾಭಿವಿಕವಾಗಿ ಯಾರಿಗೆ ಇದರ ಲಾಭ ತುವದೇಕೋ ಅವರಿಗೆ ತಲುಪುವುದಿಲ್ಲ. ಅದಕ್ಕಾಗಿ ದಯವಿಟ್ಟು ಇದರ, ಬಗ್ಗೆ ಡರೋಎನ್‌ಕ್ವೊಂ ಮಾಡಲು ಇದನ್ನು ನೇರವಾಗಿ ಲೋಕಾಯುಕ್ತಕ್ಕೆ ವಹಿಸಿಕೊಟ್ಟರೆಗೆ ಕೊನೆಯ ಪಟ್ಟಿ ಮುಂದೆ ಯಾರು ಖರೀದಿ ಮಾಡುತ್ತಾರೋ ಆ ಖರೀದಿ ಮಾಡುವವರಿಗೆ ಒಂದು ಹೆದರಿಕೆ ಇರುತ್ತದೆ, ಇದರಲ್ಲಿ ಯಾರು ತಪ್ಪಿತಸ್ಥರಿದ್ದಾರೋ ಅವರಿಗೂ ಕೂಡ ಇಂತಹ ಶಿಕ್ಷೆಯಾಗಿದೆ ಮುಂದೆ ನಾವು ಇನ್‌ಡಿಸ್ಕ್ರಿಮಿನೇಟ್ಲಿ ಖರೀದಿ ಮಾಡತಕ್ಕಂಥದ್ದನ್ನು, ಕಮಿಷನ್ ಪಡೆಯತಕ್ಕಂಥದ್ದು, ಹಣವನ್ನು ಪಡೆದುಕೊಳ್ಳತಕ್ಕಂಥದ್ದನ್ನು ಮಾಡಬಾರದು ಎನ್ನುವುದು ಅಲ್ಲಿಗೆ ಯಾರು ಅಧಿಕಾರಿಗಳಾಗಿ ಪುನ: ಬರುತ್ತಾರೋ ಅವರಿಗೆ ಅದೊಂದು ಎಚ್ಚರಿಕೆಯಾಗುತ್ತದೆ. ಅದಕ್ಕಾಗಿ ದಯವಿಟ್ಟು ಇದರ ಮೇಲೆ ಕ್ರಮ ತೆಗೆದುಕೊಂಡು, ಇದನ್ನು ನೀವು ಲೋಕಾಯುಕ್ತಕ್ಕೆ ರೆಕ್ಕೆಂಡ್ ಮಾಡಿ, ಯಾವ ಅಧಿಕಾರಿಗಳು ಇದರಲ್ಲಿ ಭಾಗಿಗಳಾಗಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳಿ, ನಾವು ಏನು ಮಾಡುತ್ತೇವೆಂದರೆ, ಸ್ಟೋರ್ ಕಿಪರ್ ಅನ್ನು ಅಮಾನತ್ತಿನಲ್ಲಿಡುವುದು, ಅಥವಾ ಸ್ಟೋರ್ ಪರ್ಚೇಸ್ ಕ್ಲರ್ಕ್ ಅಮಾನತ್ತಿನಲ್ಲಿಡುವುದುನ್ನೂ ಅದನ್ನು ಮಾಡುತ್ತೇವೆ. ಆದರೆ ಇದರ ಹಿಂದೆ ಯಾರು ನಿರ್ದೇಶಕರುಗಳಿದ್ದಾರೆ, ಜಂಟಿ ನಿರ್ದೇಕರಿರುತ್ತಾರೆ, ಉಪ ನಿರ್ದೇಶಕರಿರುತ್ತಾರೆ ಅವರು ಏನು ಮಾಡುತ್ತಿದ್ದರು? ಏಕೆಂದರೆ ಒಂದಲ್ಲ ಮೂವತ್ತೊಂಬತ್ತು ಸಾವಿರ ಅಂಗನವಾಡಿಗಳಿದ್ದಾವೆ, ಅಲ್ಲಿ ಮಾಡಬೇಕೆಂದರೆ, ಪ್ರತಿಯೊಂದು ಜಿಲ್ಲೆಯಿಂದಲೂ ಉಪ ನಿರ್ದೇಶಕರುಗಳು ಶಿಫಾರಸ್ಸು ಮಾಡಿರುತ್ತಾರೆ, ಅವರ ಶಿಫಾರಸ್ಸಿನ ಮೇಲೆ ಇಲ್ಲಿನ ನಿರ್ಧೇಶಕರು ಒಪ್ಪಿದರೆ ಅದನ್ನು ಖರೀದಿ ಮಾಡುತ್ತಾರೆ. ಅದು ಕೊಲವೊಂದು ಸಂಸ್ಥೆಗಳಲ್ಲೇ ಈ ಫುಡ್‌ಗ್ರೈಸ್ಸ್ ಅನ್ನು ಪರ್ಚೇಸ್ ಮಾಡಿದ್ದಾರೆ. ಅದಕ್ಕಾಗಿ ಇದಕ್ಕೆ ಹೆಚ್ಚಿನ ಮಾಹಿತಿಯು ಬೇಕಾಗಿಲ್ಲ, ವರದಿಯೇ ನಮ್ಮಲ್ಲಿ ಇರುವಾಗ, ನಮ್ಮ ಸದನದ ಸಮಿತಿಯೇ ಇದನ್ನು ಹೇಳುವಾಗ, ಇದನ್ನು ಮತ್ತೆ ನೋಡುತ್ತೇವೆ, ಪರಿಶೀಲನೆ ಮಾಡುತ್ತೇವೆ ಎಂದು ಹೇಳುವ ಅವಶ್ಯಕತೆ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ; ಮತ್ತು ಈ ಸದನದ ಸದಸ್ಯರ ಒಂದು ವರದಿಯ ಆಧಾರದ ಮೇಲೆ ತಾವು ತಕ್ಷಣ ಕ್ರಮವನ್ನು ಜರುಗಿಸುತ್ತೀರೆನ್ನುವ ನಂಬಿಕೆಯನ್ನು ಇಟ್ಟುಕೊಳ್ಳುತ್ತೇನೆ. ನಾನು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುವುದೇನೆಂದರೆ ಇದನ್ನು ತಕ್ಷಣವೇ ಲೋಕಾಯುಕ್ತಕ್ಕೆ ರೆಫರ್ ಮಾಡಿ ಸಂಬಂಧಿಸಿದ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಬೇಕೆನ್ನುವುದನ್ನು ತಮ್ಮಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ನಾಣಯ್ಯ:- ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರ ಕಳಕಳಿಯನ್ನು ಸರ್ಕಾರ ಈಗಾಗಲೇ ಮನಗಂಡು ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ. ಇದನ್ನು ಸಿ ಓಡಿ ತನಿಖೆಗೆ ವಹಿಸಿಕೊಡಬೇಕೆನ್ನುವ ಬಗ್ಗೆ ಈಗಾಗಲೇ ಹೇಳಿಕೆಯನ್ನೂ ಕೂಡ ಕೊಟ್ಟಿದ್ದಾರೆ, ಇದು ಮುಖ್ಯಮಂತ್ರಿಗಳ ಗಮನಕ್ಕೂ ಕೂಡ ಬಂದು ನಾನು ಮುಖ್ಯಮಂತ್ರಿಗಳ ಜೊತೆಯಲ್ಲೂ ಸಹ ಚರ್ಚೆ ಮಾಡಿದ್ದೇನೆ. ಈಗ ತಾವು ಇದನ್ನು ಲೋಕಾಯುಕ್ತಕ್ಕೆ ವಹಿಸಿಕೊಡಬೇಕು ಎನ್ನುವ ವಿಚಾರವನ್ನು ಹೇಳುತ್ತಿದ್ದೀರಿ, ಮಾನ್ಯ ಸಭಾಧ್ಯಕ್ಷರೆ, ಇದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಇದರ ಬಗ್ಗೆ ಸರ್ಕಾರ ಮುಂದಿನ ಕ್ರಮ ಕೈಗೊಳ್ಳುವ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸಿ. ಓ. ಡಿ. ಗೆ ವಹಿಸಿದರೆ ಏನಾಗುತ್ತದೆಂದು ನಾನು ಏತಕ್ಕೆ ಹೇಳುತ್ತೇನೆಂದರೆ, ಅಲ್ಲಿ ಐಪಿಎಸ್ ಅಧಿಕಾರಿಗಳಿರುತ್ತಾರೆ, ಇದರಲ್ಲಿ ಭಾಗಿಗಳಾದವರು, ಐಎಎಸ್ ಅಧಿಕಾರಿಗಳು ಇರುತ್ತಾರೆ, ಹೈಯರ್ ಗ್ರೇಡ್‌ನವರು ಇರುತ್ತಾರೆ, ಆಗ ಸಿ ಓಡಿಯವರಿಗೂ ಕೂಡ ಮುಜುಗರ. ಆ ಸಬ್ ಇನ್ಸ್‌ಪೆಕ್ಟರ್, ಡಿವೈಎಸ್‌ಪಿ ಯೋ, ಎಸ್‌ಪಿಯೋ ಇವರಿಗೂ ಕೂಡ ಕೆಲವು ಸಾರಿ ಮುಜುಗರವಾಗುತ್ತದೆ. ಅದಕ್ಕೆ ದಯವಿಟ್ಟು, ಐಎಎಸ್ ಅಧಿಕಾರಿಗಳು, ಗೃಹ ಇಲಾಖೆಯಲ್ಲಿ ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿಯಾಗುತ್ತಾರೆ, ಸ್ವಾಭಾವಿಕವಾಗಿ ಅವರ ಕೈಕೆಳಗೆ ಇವರು ಕೆಲಸ ಮಾಡುವಾಗ ಜಾಗ್ರತೆಯಿಂದ ಇರಬೇಕಾಗುತ್ತದೆ. ಅದಕ್ಕಾಗಿ ಇದನ್ನು ದಯವಿಟ್ಟು ಲೋಕಾಯುಕ್ತಕ್ಕೆ ರೆಫರ್ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು:- ಮಂತ್ರಿಗಳಿದ್ದಾರೆ, ಏನು ಹೇಳುತ್ತಾರೆಂದು ನೋಡೋಣ. ಹಿರಿಯ ಐಎಎಸ್ ಅಧಿಕಾರಿಗಳಾದ ಅಗವಾನೆಯವರನ್ನು ನೇಮಕ ಮಾಡಿ, ಹೌಸ್ ಕಮಿಟಿ ಕೊಟ್ಟಿರುವ findings ಏನಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಅಗವಾನಿಯವರ ಪ್ರಾಮಣಿಕತೆಯ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ He is a very committed man. ಅವರು ಧಾರವಾಡದ ಜಿಲ್ಲಾಧಿಕಾರಿಗಳನ್ನಾಗಿ ಹಾಕಿದಾಗ ನಾನು ನೋಡಿದ್ದೇನೆ, ಬಹಳ ಒಳ್ಳೆಯವರು. ಆದರೆ ಇಲ್ಲಿ ಏನಾಗುತ್ತದೆಂದರೆ, ಪಾಪ ಅವರು ಐಎಎಸ್ ಆಫೀಸ್ ಇರುವುದರಿಂದ ಇನ್ನೊಬ್ಬರು ಐಎಎಸ್ ಆಫೀಸರ್ ಮೇಲೆ ತನಿಖೆ ನಡೆಯುವಾಗ ಒತ್ತಡ ಬರುವುದು ಅಥವಾ ಅವರ ಸಂಘವೇನಿರುತ್ತದೆ, ಅಲ್ಲಿ, ಅವರವರ ಮೇಲೆಯೇ ಎನ್‌ಕ್ವೈರಿ ಇರುವಾಗ ಮುಜುಗರವಾಗಬಹುದು. ಅದಕ್ಕಾಗಿ ನಾನು, ಈ ಉಪಲೋಕಾಯುಕ್ತ, ಲೋಕಾಯುಕ್ತಕ್ಕೆ ಇದನ್ನು ರೆಫರ್ ಮಾಡಿದರೆ ಇಂಪಾರ್ಶಿಯರ್ ಜಡ್ಜೆಸ್ ಇರುವುದರಿಂದ ಎಂಕ್ವೈರಿಯಾಗುತ್ತದೆಂದು ಬೇಡ ಹೇಳಿದ್ದು.

MR. SPEAKER:- I should be fair.ಈ ಸದನದ ಸಮಿತಿ ವರದಿ ಕೊಟ್ಟ ಮೇಲೆ ನನ್ನ ಜೊತೆ ಬಂದು ಸರ್ಕಾರದವರು ಚರ್ಚೆ ಮಾಡಿದರು. ನಾನು ಕ್ವಿಕ್ ಆಗಿ ಆಗಬೇಕೆಂದು ಹೇಳಿದೆ. ಆಮೇಲೆ ಅವರು ಈ ರೀತಿ ಮೂರು ಜನ ಅಧಿಕಾರಿಗಳನ್ನು ಸಲಹೆ ಮಾಡಿದವರ ಯಾರಿಗಾದರೂ ಒಪ್ಪಿಸುತ್ತೇವೆಂದು ಹೇಳಿದರು. ಏನೆಂದರೆ, ವಿಷಯ ಸಮಿತಿಯ ವರದಿಯಲ್ಲಿ ಫೈಂಡಿಂಗ್, ರೆಕಮೆಂಡೇಶನ್ಸ್ ಏನು ಕೊಟ್ಟಿದ್ದಾರೆ, ಅದನ್ನು ಹೌದು ಅಥವಾ ಇಲ್ಲ ಎನ್ನುವುದನ್ನು ಕ್ವಿಕ್ ಆಗಿ ಕನ್‌ಫರ್ಮ್ ಮಾಡಿಕೊಂಡು ಆರುವಾರಗಳು, ಎಂಟು ವಾರಗಳೊಳಗೆ ಕೊಟ್ಟುಬಿಟ್ಟರೆ, Diractly the police can be asked to prosecoute these who are found guilty inestead of taking more time. ಆ ರೀತಿ ಮಾಡಿ ಎಂದು ಹೇಳಿದ್ದೇನೆ. I think that should be alright. we have been devising new experiments to tackle the aituation.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, This Department is headed by senior officer. Mr. Agewane is a Divisional Commissioner's rank. ಕಾರ್ಯದರ್ಶಿ ರ್ಯಾಂಕ್‌ನವರು ಇದರಲ್ಲಿ ಇರುತ್ತಾರೆ, ಮುಜುಗರವಾಗಬಾರದೆನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಅದಕ್ಕಾಗಿ ಒಬ್ಬ ಉಪಲೋಕಾಯುಕ್ತ ಅಥವಾ ಲೋಕಾಯುಕ್ತ ರವರಿಗೆ ಇದನ್ನು ರೆಫರ್ ಮಾಡಿ ಎಂದು ಹೇಳಿದ್ದು.

MR.SPEAKER:- There is sufficient force in what you have said.

ಶ್ರೀ. ಎಂ.ಪಿ.ನಾಣಯ್ಯ:- ಮಾನ್ಯ ಸಭಾಧ್ಯಕ್ಷರೆ, ನಾನು ಇಷ್ಟನ್ನು ಮಾತ್ರ ಹೇಳುತ್ತೇನೆ, ಈಗಾಗಲೇ ಒಬ್ಬ ಅಧಿಕಾರಿಯನ್ನು ನೇಮಕ ಮಾಡುತ್ತಿದ್ದೇವೆ. ಬಹುಶ: ಆ ಅಧಿಕಾರಿ ಯಾವುದೇ ತನಿಖೆ ಮಾಡಬೇಕಾದರೆ ಸದನದ ಸಮಿತಿಯ ಅವರ ಮುಂದಿದೆ, ಆ ವರದಿಯ ಆಧಾರದ ಮೇಲೆ ಮತ್ತು ಯಾವ ವಿಚಾರಣೆ ಮಾಡಿದ್ದಾರೆ, ಶಿಫಾರಸ್ಸುಗಳೇನೂ ಎನ್ನುವುದನ್ನು ಗಮನಿಸಬೇಕಾಗುತ್ತದೆ.

ಅಧ್ಯಕ್ಷರು:- ಇದರ ಮೂಲ ಎಲ್ಲಿ ಟ್ರೇಸ್ ಆಗುತ್ತದೆಂದರೆ ಇಡೀ ರಾಜ್ಯದಲೆಲ್ಲಾ ಸರ್ಕಾರಿ ಸ್ವಾಮ್ಯದಲ್ಲಿರುವ ಆಗ್ರೋ ಕಾರನ್‌ಗೆ ಕೊಡುತ್ತಾರೆ, ಮೂರು ಜಿಲ್ಲೆಯಲ್ಲೊ, ನಾಲ್ಕು ಜಿಲ್ಲೆಯಲ್ಲೊ ಖಾಸಗಿಯವರಿಗೆ ಕೊಡುತ್ತಾರೆ. ಇಂತಿಷ್ಟು ಗೋಧಿ ಕೊಡಬೇಕು ಎಂದು ಕೋಟಾ ಏನು ನಿಗದಿ ಮಾಡಿದ್ದಾರೆ, ಅದನ್ನು ಹೇಗೆ ನಿಗದಿ ಮಾಡಿದರೋ ಗೊತ್ತಿಲ್ಲ, ಅದಕ್ಕೆ ಆಧಾರ

ಏನೆಂದೇ ಗೊತ್ತಿಲ್ಲ. ಉದಾಹರಣೆಗೆ ಹನ್ನೆರೆಡು ಸಾವಿರ ಮೆಟ್ರಿಕ್ ಟನ್‌ವೀಟ್ ಕೋಲಾರ ಜಿಲ್ಲೆಗೆ ಎಂದು ಹೇಳುತ್ತಾರೆ, ಈ ಹನ್ನೆರಡು ಸಾವಿರ ಮೆಟ್ರಿಕ್ ಟನ್‌ವೀಟ್ ಗೆ. ಈ ಅಂಕಿಅಂಶಕ್ಕೆ ಅವರು ಯಾವ ಆಧಾರದ ಮೇಲೆ ಬಂದರು ಎನ್ನುವುದಕ್ಕೆ ಅವರ ಹತ್ತಿರ ಉತ್ತರವಿಲ್ಲ, that itself is very intriguing.

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ: ಆದುದರಿಂದ ಮಾನ್ಯ ಖರ್ಗೆಯವರಿಗೆ ನಾನು ಇಷ್ಟು ಭರವಸೆಯನ್ನು ಕೊಡುತ್ತೇನೆ Let's await the report of that officer. ಅದು ಬಂದ ನಂತರ, ನಮಗೆ ಸದನದ ಸಮಿತಿಯ ವರದಿಯು ಇದೆ, ಆ ಒಬ್ಬ ಅಧಿಕಾರಿಯ ವರದಿಯು ಬರುತ್ತದೆ, ಬಂದ ನಂತರ, we will certainly make a reference to the Lokayuktha. Let's await the report of that officer. Thereafter we will take a decision.

MR. SPEAKER:-Last opportunity to Mr. Srirama Reddy. I have given opportunity to number of people. Mr. Srirama Reddy. You please avail this opportunity. Mr. Jayachandra. Kindly cooperate.

ಶ್ರೀ ಪಿ.ಆರ್. ಸಗೀರ್ ಅಹಮ್ಮದ್:- ಸುಪ್ರೀಂಕೋರ್ಟ್‌ದು ಒಂದು ತೀರ್ಪಿದೆ ನನಗೆ ಎರಡೇ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು:- ಎಷ್ಟು ಹೊತ್ತಾಗಿದೆ ಗೊತ್ತಾ ಹತ್ತು ಗಂಟೆ ಇಪ್ಪತ್ತು ನಿಮಿಷಕ್ಕೆ ಪ್ರಶ್ನೋತ್ತರ ವೇಳೆ ಆರಂಭವಾಯಿತು ಹನ್ನೊಂದು ಗಂಟೆ ಇಪ್ಪತ್ತು ನಿಮಿಷಕ್ಕೆ ಪ್ರಶ್ನೋತ್ತರ ವೇಳೆಯನ್ನು ಮುಗಿಸಿ, ಅವಗಿನಿಂದ ಸದನವನ್ನು ನಡೆಸಿಕೊಂಡು ಬರುತ್ತಿದ್ದೇನೆ, ಸಮಯ ಎಷ್ಟು ಆಗುತ್ತಿದೆ ನೋಡಿ, ಬೇರೆಯವರು ನನ್ನ ಬಗ್ಗೆ ಏನು ತಿಳಿದುಕೊಳ್ಳುತ್ತಾರೆ. ಮಾನ್ಯ ಶ್ರೀರಾಮರೆಡ್ಡಿಯವರು, ನೀವೂ ಅಷ್ಟೆ ಎಲ್ಲದಕ್ಕೂ ಮಾತನಾಡುವುದಕ್ಕೆ ಎದ್ದು ನಿಲ್ಲುತ್ತೀರಿ ಹಾಗಾಗಿ ನಿಮ್ಮ ವಿಷಯ ಸ್ಪೇಡ್‌ಬ್ಯಾಂಕ್ ಆಗುತ್ತದೆ ಮಾತನಾಡುವುದಕ್ಕೆ ಸಮಯ ಸಿಗುವುದಿಲ್ಲ, ಈಗ ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾಪ ಮಾಡತಕ್ಕ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. ಸಮಗ್ರ ಶಿಶು ಸಂರಕ್ಷಣಾ ಯೋಜನೆಯಲ್ಲಿ ಪೌಷ್ಟಿಕ ಆಹಾರ ಒದಗಿಸತಕ್ಕಂಥದ್ದರಲ್ಲಿ ಅವ್ಯವಹಾರ ನಡೆದಿದೆ. ಅದು ಎಣ್ಣೆ, ಗೋಧಿ, ರವೆ, ಹಾಲು ಇವೆಲ್ಲಾ ಇರಬಹುದು. ಇದರಲ್ಲಿ ಸರಿಸುಮಾರು ಒಂದು ಸಾವಿರ ಕೋಟಿ ರೂಪಾಯಿ ಅವ್ಯವಹಾರ ನಡೆದಿರತಕ್ಕಂಥದ್ದಕ್ಕೆ ನನ್ನ ಹತ್ತಿರ ದಾಖಲೆ

ಇಲ್ಲ, ಆದರೆ ಮಾಹಿತಿ ಇದೆ. ಇದರ ಸರಬರಾಜು ಬಗ್ಗೆ ತನಿಖೆ ಮಾಡಲಿಕ್ಕೆ ಸರ್ಕಾರ ಮುಂದಾಗಬೇಕು. ಇದರಲ್ಲಿ ರವೆ, ಗೋಧಿ ಮುಂತಾದವುಗಳನ್ನು ಸರಬರಾಜು ಮಾಡಲಾಗಿದೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರ ಹತ್ತಿರ ದಾಖಲೆ ಇಲ್ಲ, ಮಾಹಿತಿ ಇದೆಯೆಂದು ಹೇಳುತ್ತಿದ್ದಾರೆ.

MR. SPEAKER:- Mr. Reddy, you must sound more responsible.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೆ, ವರದಿಯಲ್ಲಿ ಗೋಧಿ ಸರಬರಾಜಿನಲ್ಲಿ 25 ಕೋಟಿ ರೂಪಾಯಿ ಅವ್ಯವಹಾರ ಆಗಿದೆಯೆಂದು ಹೇಳಿದ್ದಾರೆ. ಇದು ಒಂದು ವಸ್ತುವಿನ ಸಂಬಂಧಪಟ್ಟಹಾಗೆ ಅದಂಥ ಅವ್ಯವಹಾರ. ಇದರಂತೆ ಹಲವಾರು ಸರಕುಗಳನ್ನು ಸರಬರಾಜು ಮಾಡುತ್ತಿದ್ದಾರೆ.

MR.SPEAKER:- Presumping that the enquiry is ordered to be looked into by CBI,.ಟರ್ಮ್ಸ್ ಆಫ್ ರೆಫರೆನ್ಸ್ ಏನು? ನಿಖರವಾದ ಮಾಹಿತಿ ಏನು ಎಂಬುದನ್ನು ಹೇಳಬೇಕು.

ಶ್ರೀ ಜಿ.ವಿ. ಶ್ರೀರಾಮೆರೆಡ್ಡಿ:- ಮಾನ್ಯ ಅಧ್ಯಕ್ಷರೆ, ಐಸಿಡಿಎಸ್ ನಲ್ಲಿ ಒಂದೇ ಒಂದು ಅಂಶದಲ್ಲಿ 25 ಕೋಟಿ ಅವ್ಯವಹಾರವಾಗಿದೆಯೆಂದರೆ ಇನ್ನು ಹಲವಾರು ಆಹಾರ ಪದಾರ್ಥಗಳನ್ನು ಸರಬರಾಜು ಮಾಡುತ್ತಿದ್ದಾರೆ. ಒಂದಕ್ಕೆ ಇಷ್ಟು ಅವ್ಯವಹಾರ ಆದರೆ.

ಅಧ್ಯಕ್ಷರು:- ಈ ರೀತಿ ಲೆಕ್ಕ ಹಾಕುವುದಕ್ಕೆ ಬರುವುದಿಲ್ಲ. ತಾವು ಇನ್ನೂ ಖಚಿತವಾದ ಮಾಹಿತಿಯನ್ನು ತೆಗೆದುಕೊಂಡು ಬನ್ನಿ. ಆಗ ಬೇಕಾದರೆ ಎನ್‌ಕ್ವೈರಿ ಆರ್ಡರ್ ಮಾಡಿಸಬಹುದು. There is no problem for that..

ಶ್ರೀ.ಜಿ.ವಿ.ಶ್ರೀರಾಮರೆಡ್ಡಿ:- ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ಹೇಳುವುದೇನೆಂದರೆ ಸಮಗ್ರ ಶಿಶು ಸಂರಕ್ಷಣಾ ಯೋಜನೆಯಲ್ಲಿ ಪೌಷ್ಟಿಕ ಆಹಾರವನ್ನು ಒದಗಿಸುವುದರಲ್ಲಿ ಏನು ಅವ್ಯವಹಾರ ನಡೆದಿದೆ ಇದರ ಬಗ್ಗೆ ತನಿಖೆಯನ್ನು ಮಾಡಿಸಬೇಕು.